**ಅಸಲು ದಾವ ಸಂಖ್ಯೆಃ 580/2020**
**ಪಿ .ಡಬ್ಲೂ -1**

ದಿಃ 01.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ವಿ ಕೆ ರವರಿಂದಃ-**

1. 1 ರಿಂದ 3 ನೇ ವಾದಿಯರು ನನಗೆ ಬರೆದುಕೊಟ್ಟಿರುವ ಸಾಮಾನ್ಯ ಅಧಿಕಾರ ಪತ್ರ ನೊಂದಣಿಯಾಗಿರುವುದಿಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡಲು ನನಗೆ ಅಧಿಕಾರ ಪತ್ರ ನೀಡಿರುವುದಿಲ್ಲ ಆದರೆ ದಾವೆ ನಡೆಸಲು ಹಾಗೂ ಸಾಕ್ಷಿ ನುಡಿಯಲು ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಅಧಿಕಾರ ಪತ್ರವನ್ನು ಸಾಮಾನ್ಯ ವ್ಯವಹಾರಗಳಿಗೆ ನೀಡಿದ್ದು, ನಿರ್ಧಿಷ್ಟ ವ್ಯವಹಾರಕ್ಕಾಗಿ ನೀಡಿರುವುದಿಲ್ಲ. ಸಾಮಾನ್ಯ ಅಧಿಕಾರ ಪತ್ರದ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಎಲ್ಲ ವಾದಿಯರು ಸೇರಿ ಜಿಪಿಎ ತಯಾರಿಸಲು ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ನಾನು ನಿಶಾನೆ ಪಿ 1 ರ ಎಲ್ಲ ಅಂಶಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ನಿಶಾನೆ ಪಿ 1 ನ್ನು ಸಬರಜಿಸ್ಟರ ಕಚೇರಿಯಲ್ಲಿ ನೊಂದ ಮಾಡಿಸಲು ನಮಗೆ ಯಾವುದೇ ಅಡಚಣೆ ಇರಲಿಲ್ಲ.

2. ಸಿಟಿಎಸ ನಂಬರ 4012/ಎ, 4012/ಬಿ ಹಾಗೂ 4012/ಸಿ ಮಟ್ಟಿಕಲ್ಲಿ ರವರ ಮನೆತನದ ಆಸ್ತಿ ಎಂದರೆ ಸರಿ. ಸದರಿ 3 ಮನೆಗಳು ನೆಲಮಹಡಿ ಹಾಗೂ 1 ನೇ ಮಹಡಿ ಕಟ್ಟಡವಾಗಿದ್ದು, ಎಲ್ಲವು ಕೆಂಪುಹಂಚಿನ ಮನೆಗಳು ಎಂದರೆ ಸರಿ. ಟಿಎಸ ನಂಬರ 4012/ಎ ಮತ್ತು 4012/ಬಿ ಮನೆಗಳ ನಡುವಿನ ಗೋಡೆ ಸಾಮಾಯಿಕ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2 ಮನೆಗಳಿಗೂ ಸ್ವತಂತ್ರ ಗೋಡೆಗಳು ಇದ್ದವು ಎಂದು ನುಡಿಯುತ್ತಾರೆ. ಸಿಟಿಎಸ ನಂಬರ 4012/ಎ ಮತ್ತು 4012/ಬಿ ನಡುವಿನ ಗೋಡೆಯ ಮೇಲೆ ಎರಡು

ಮನೆಗಳ ತಾಟು ಇದ್ದವು ಎಂದರೆ ಸರಿ. 2 ತಾಟುಗಳು ಒಂದೇ ಗೋಡೆಯ ಮೇಲೆ ನನ್ನ ಅಜ್ಜನ ಕಾಲದಿಂದಲೂ ಇದ್ದವು. ಸದರಿ ಗೋಡೆಯು ಈಗಲೂ ಅಸ್ತಿತ್ವದಲ್ಲಿ ಇದೆ ಎಂದರೆ ಸರಿ. ಸಿಟಿಎಸ ನಂಬರ 4012/ಎ ಮತ್ತು 4012/ಬಿ ನಡುವಿನ ಗೋಡೆಯಲ್ಲಿ ಇಬ್ಬರೂ ಮನೆಗಳ ಗೋಡೆಯ ಒಳಗೆ ಕಪಾಟುಗಳು ಇವೆ ಎಂದರೆ ಸರಿ. ಸದರಿ ಕಪಾಟುಗಳು ನನ್ನ ಅಜ್ಜನ ಕಾಲದಿಂದ ಇದೆ. ಸಿಟಿಎಸ ನಂಬರ 4012/ಎ ಮತ್ತು 4012/ಬಿ ನಡುವಿನ ಗೋಡೆಯ ಬಗ್ಗೆ ನನ್ನ ವಕೀಲರಿಗೆ ದಾವೆ ಹೂಡುವ ಮುನ್ನ ಮಾಹಿತಿ ನೀಡಿರುತ್ತೇನೆ.

3. ಸಿಟಿಎಸ ನಂಬರ 4012/ಎ ಮತ್ತು 4012/ಬಿ ರ ಸ್ವತ್ತಿನ ನಂತರ 4012/ಸಿ ರ ಸ್ವತ್ತು ಇದೆ ಎಂದರೆ ಸರಿ. ಸಿಟಿಎಸ ನಂಬರ 4012/ಬಿ ರ ಸ್ವತ್ತಿನ ತಾಟು 4012/ಸಿ ರ ಗೋಡೆಯ ಮೇಲೆ ಇತ್ತು ಎಂದರೆ ಸಾಕ್ಷಿಯು 4013 ರ ಗೋಡೆಯ ಮೇಲೆ ಇತ್ತು ಎಂದು ನುಡಿಯುತ್ತಾರೆ. ಮಟ್ಟಿಕಲ್ಲಿ ಕುಟುಂಬಕ್ಕೆ ಸಿಟಿಎಸ್ ನಂಬರ 4012 ಹಾಗೂ 4013 ಎರಡು ಪ್ರತ್ಯೇಕ ಸ್ವತ್ತುಗಳು ಇದ್ದವು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಿಟಿಎಸ್ ನಂಬರ 4012 ಮತ್ತು 4013 ಮೊದಲಿಗೆ ಒಂದೇ ಸ್ವತ್ತು ಇದ್ದು, ನಂತರದಲ್ಲಿ ಸಿಟಿಎಸ್ ನಂಬರ 4012 ಹಾಗೂ 4013 ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಎರಡು ಸಿಟಿಎಸ್ ನಂಬರಗಳ ಮೂಲ ಸಿಟಿಎಸ್ ನಂಬರ ಏನು ಎಂದು ನನಗೆ ಗೊತ್ತಿಲ್ಲ.

4. ಸಿಟಿಎಸ್ ನಂಬರ 4012 ಮತ್ತು 4013 ಯಾವ ರೀತಿ ವಿಭಜನೆಯಾಗಿದೆ ಹಾಗೂ ಯಾರ ಹೆಸರಿನಲ್ಲಿದೆ ಎಂದು ನಾನು ಸಿಟಿಎಸ್ ಕಚೇರಿಯಲ್ಲಿ ವಿಚಾರಣೆ ಮಾಡಿರುತ್ತೇನೆ. 1952 ರಲ್ಲಿ ವಿಭಾಗ ಪತ್ರದಂತೆ ಸಿಟಿಎಸ್ ನಂಬರ 4012 ಮತ್ತು 4013 ವಿಭಜನೆಗೊಂಡಿರುತ್ತದೆ ಎಂದು ನನಗೆ ತಿಳಿದು ಬಂದಿರುತ್ತದೆ ಎಂದರೆ ಸರಿ. ಸದರಿ ವಾಟ್ನಿ ಪತ್ರವನ್ನು ನಾನು ಓದಿ

ತಿಳಿದುಕೊಂಡಿರುತ್ತೇನೆ.  ಸದರಿ ವಾಟ್ನಿ ಪತ್ರವನ್ನು ನಾನು 2018 ರಲ್ಲಿ ನೋಡಿರುತ್ತೇನೆ. ಸದರಿ ವಾಟ್ನಿ ಪತ್ರವನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ವಾಟ್ನಿ ಪತ್ರದಲ್ಲಿ  2X40 ಅಡಿಯ ಪಶ್ಚಿಮ ಗೋಡೆಯು ನಮ್ಮ ಹಿಸ್ಸೆಗೆ ಬಂದಿರುತ್ತದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.  ಸದರಿ ನಮೂದು ಇಲ್ಲದ ಕಾರಣ ವಾಟ್ನಿ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2 ಅಡಿ ಅಗಲ 40 ಅಡಿ ಉದ್ದದ ಗೋಡೆ ನಮ್ಮ ಹಿಸ್ಸಗೆ ಬಂದಿರುವ ಬಗ್ಗೆ ವಕೀಲರಿಗೆ ವಾಟ್ನ ಕಾಗದವನ್ನು ತೋರಿಸಿರುತ್ತೇನೆ.  ವಾಟ್ನಿ ಪತ್ರದ ಪ್ರಕಾರ ಸದರಿ ಗೋಡೆಯು ಸಿಟಿಎಸ್ ನಂಬರ 4012/ಬಿ ಹಾಗೂ 4012/ಸಿ ರ ನಡುವಿನ ಸಮಾಯಿಕ ಗೋಡೆ ಎಂದು ನಮೂದು ಮಾಡಿದೆ ಎಂದರೆ ಸರಿಯಲ್ಲ. ನನ್ನ ಅಜ್ಜನ ಕಾಲದಿಂದಲೂ ಸದರಿ ಗೋಡೆಯು ಸಮಾಯಿಕ ಗೋಡೆ ಇರುವುದು ತಿಳಿದಿದೆ ಎಂದರೆ ಸರಿಯಲ್ಲ. 2X40  ಅಡಿಯ ಗೋಡೆ ಸಿಟಿಎಸ್ ನಂಬರ  4012/ಬಿ ರ ಸಂಪೂರ್ಣ ಪ್ರತ್ಯೇಕ ಹಾಗೂ ನಮ್ಮ ಮಾಲ್ಕಿಯ  ಆಸ್ತಿ ಎಂದು ತೋರಿಸಲು ವಾಟ್ನಿ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

5. ವಾದಿಯರಿಗೂ ಹಾಗೂ 1 ನೇ ಪ್ರತಿವಾದಿಗೆ ಸ್ವತ್ತನ್ನು ಮಾರಾಟ ಮಾಡಿದ ರವೀಂದ್ರ ರವರಿಗೂ ಗೋಡೆಯ ವಿಚಾರದಲ್ಲಿ ಯಾವುದೇ ತಂಟೆ ತಕರಾರು ಇರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಸ್ವತ್ತನ್ನು ಖರೀದಿ ಮಾಡಿದ ನಂತರ ನಾವು ಅವರಿಗೂ ತೊಂದರೆ ನೀಡಲು ಶುರುಮಾಡಿರುತ್ತೇವೆ ಎಂದರೆ ಸರಿಯಲ್ಲ.   1 ನೇ ಪ್ರತಿವಾದಿ ಮನೆ ನಿರ್ಮಾಣ ಮಾಡಬೇಕೆನ್ನುವಾಗ ನಾನು ಅವರ ವಿರುದ್ದ ಕಾರ್ಪೊರೇಶನಲ್ಲಿ ದೂರು ನೀಡಿರುತ್ತೇನೆ ಎಂದರೆ ಸರಿ.  ಸಾಕ್ಷಿಯು ಮುಂದುವರೆದು ಮನೆ ನಿರ್ಮಾಣ ಮಾಡುವ ಬಗ್ಗೆ 1 ನೇ ಪ್ರತಿವಾದಿ ತನ್ನ ಬಳಿ ಅನುಮತಿ ಪಡೆದಿರಲಿಲ್ಲ ಎಂದು ನುಡಿಯುತ್ತಾರೆ.  1 ಹಾಗೂ 2 ನೇ ಪ್ರತಿವಾದಿಯರು

ತಾವು ಖರೀದಿ ಮಾಡಿದ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡುತ್ತಿದ್ದು, ನಮ್ಮ ಸ್ವತ್ತಿಗೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ತಮ್ಮ ಗೋಡೆಯನ್ನು ಅನಧಿಕೃತವಾಗಿ 1 ಮತ್ತು 2 ನೇ ಪ್ರತಿವಾದಿ ಕಟ್ಟಡ ನಿರ್ಮಾಣ ಮಾಡಲು ಪ್ರಯತ್ನಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಿಟಿಎಸ್ ನಂಬರ 4012/ಬಿ ಮತ್ತು 4012/ಸಿ ರ ಸಂಬಂಧ ನಾನು ಸಿಟಿಎಸಿ ಸರ್ವೇ ಮಾಡಿಸಿರುತ್ತೇನೆ. ಸಿಟಿಎಸ್ ನಂಬರ 4012/ಎ, 4012/ಬಿ, 4012/ಸಿ ಮತ್ತು 4013 ಸ್ವತ್ತುಗಳ ಅಳತೆ ಮಾಡಲು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸಿಟಿಎಸ್ ನಂಬರ 4013 ಪ್ರತ್ಯೇಕ ಸ್ವತ್ತು ಇದ್ದು, ಪ್ರತ್ಯೇಕ ಮ್ಯಾಪ ಇರುತ್ತದೆ ಎಂದರೆ ಸರಿ. ಸಿಟಿಎಸ್ ನಂಬರ 4012/ಎ, 4012/ಬಿ ಮತ್ತು 4012/ಸಿ ರ ಸ್ವತ್ತುಗಳ ಪ್ರತ್ಯೇಕ ಮ್ಯಾಪಗಳು ಇರುತ್ತವೆ ಎಂದರೆ ಸರಿ. ಸಿಟಿ ಸರ್ವೇ ಇಲಾಖೆಯ ಮ್ಯಾಪನಲ್ಲಿ ನಮೂದು ಮಾಡಿರುವ ವಿಸ್ತೀರ್ಣದ ಬಗ್ಗೆ ನಾನು ಎಲ್ಲಿಯು ತಕರಾರು ಸಲ್ಲಿಸಿಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4012/ಬಿ ಸಿಟಿ ಸರ್ವೇ ಮ್ಯಾಪನಲ್ಲಿ 2X40 ಅಡಿಯ ಗೋಡೆ ನಮ್ಮ ಮಾಲ್ಕೀಯದ್ದು ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ಸದರಿ ನಮೂದು ಇರುವ ನಕಾಶೆಯನ್ನು ನಾನು ಹಾಜರುಪಡಿಸಿರುವುದಿಲ್ಲ. ಸಿಟಿಎಸ್ ನಂಬರ 4012/ಎ ಮತ್ತು 4012/ಬಿ ರ ನಡುವಿನ ಸಮಾಯಿಕ ಗೋಡೆ ಇರುವ ಬಗ್ಗೆ ಸಿಟಿ ಸರ್ವೇ ಮ್ಯಾಪ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4012/ಬಿ ರ ವಿಸ್ತೀರ್ಣ ಪೂರ್ವ ಪಶ್ಚಿಮ 11 ಅಡಿ ದಕ್ಷಿಣ ಉತ್ತರ 40 ಅಡಿ ಎಂದು ವಾದ ಪತ್ರದಲ್ಲಿ ನಮೂದು ಮಾಡಿರುವುದು ಗೋಡೆ ಸಮೇತ ಇರುವ ಅಳತೆಯಾಗಿರುತ್ತದೆ. ಸದರಿ ಅಳತೆಯು ಗೋಡೆ ಸಮೇತ ಇದೆ ಎಂದು ವಕೀಲರಿಗೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ನಮ್ಮ ಸ್ವತ್ತಿನ ದಕ್ಷಿಣೊತ್ತರ ಗೋಡೆಯ ಬಗ್ಗೆ ನಮ್ಮದು ತಕರಾರು ಇರುವುದಿಲ್ಲ. ನಮ್ಮ ಮನೆಯ ಪೂರ್ವ ಹಾಗೂ ಪಶ್ಚಿಮದ ಗೋಡೆಗಳು ಸಮಾಯಿಕ ಗೋಡೆಗಳಾಗಿದ್ದು, ನಮ್ಮ ಮಾಲ್ಕೀಯದ್ದು ಅಲ್ಲ

ಎಂದರೆ ಸರಿಯಲ್ಲ. 11X40 ಅಡಿ ಎಂದು ಖೊಟ್ಟಿ ಚೆಕ್ ಬಂದಿ ನೀಡಿ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

6. ವಾದ ಪತ್ರದಲ್ಲಿ ಸಿಟಿಎಸ್ ನಂಬರ 4012/ಸಿ ರ ಸ್ವತ್ತಿನ ಬಗ್ಗೆ ಏಕೆನಮೂದುದು ಮಾಡಿದ್ದೀರಾ ಎಂದರೆ ಸಾಕ್ಷಿಯು ಸದರಿ ಸ್ವತ್ತಿನ ಮಾಲೀಕರು ನಮ್ಮ ಗೋಡೆಗೆ ಹಾನಿ ಮಾಡಿದ್ದರ ಮೇರೆಗೆ ಗೋಡೆ ಬಿದ್ದು ಹೋಗಿರುವುದರಿಂದ ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಲಾಗಿದೆ ಎಂದು ನುಡಿಯುತ್ತಾರೆ. ಸಿಟಿಎಸ್ ನಂಬರ 4012/ಸಿ ರ ವಿಸ್ತಿರ್ಣ 14X40 ಅಡಿ. ರವಿಂದ್ರ ರವರ ಕಾಲದಲ್ಲಿ ಸಿಟಿಎಸ್ ನಂಬರ 4012/ಸಿ ಉದ್ದ ಅಗಲ ಪೂರ್ವ ಪಶ್ಚಿಮ 14 ಅಡಿ ದಕ್ಷಿಣೊತ್ತರ 40 ಅಡಿ ಇತ್ತು ಎಂದರೆ ಸರಿ. ರವಿಂದ್ರ ರವರು ವಾಸಮಾಡುವಾಗಲು ಸಿಟಿಎಸ್ ನಂಬರ 4012/ಸಿ ಸ್ವತ್ತಿನ ಪೂರ್ವ ಪಶ್ಚಿಮ ಗೋಡೆಗಳಲ್ಲಿ ಕಪಾಟುಗಳು ಇದ್ದು ಅವುಗಳನ್ನು ಅವರು ಉಪಯೋಗಿಸುತ್ತಿದ್ದರು ಎಂದರೆ ಸರಿ. ಸದರಿ ಗೋಡೆಗಳ ಕಪಾಟುಗಳನ್ನುಉಪಯೋಗಿಸುವ ಕುರಿತು ನಾನಗಲೀ ನನ್ನ ತಂದೆಯಾಗಲೀ ಎಂದಿಗೂ ತಕರಾರು ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ಮನೆಯ ಪಶ್ಚಿಮ ದಿಕ್ಕಿನ ಗೋಡೆಯ ಕಪಾಟಿನ ಉಪಯೋಗಕ್ಕೆ ರವಿಂದ್ರ ರವರು ಆಗಲೀ ಅಥವಾ ಅವರು ಕುಟುಂಬದವರು ಆಗಲೀ ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿ. ರವಿಂದ್ರ ರವರ ಮನೆಯ ತಾಟು ಸಿಟಿಎಸ್ ನಂಬರ 4013 ಹಾಗೂ 4012/ಬಿ ರ ಗೋಡೆಗಳ ಮೇಲೆ ಇತ್ತು . ಸಿಟಿಎಸ್ ನಂಬರ 4012/ಸಿ ರ ಸ್ವತ್ತಿನ ಪಶ್ಚಿಮ ಗೋಡೆಯು ಯಾವ ಮಾಲ್ಕೀಯದ್ದು, ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4012/ಸಿ ರ ಪಶ್ಚಿಮ ದಿಕ್ಕಿನ ಗೋಡೆ ರವೀಂದ್ರ ರವರ ಸಂಪೂರ್ಣ ಮಾಲ್ಕೀಯದಾಗಿತ್ತು ಎಂದರೆ ಸರಿ. ಸಿಟಿಎಸ್ ನಂಬರ 4012/ಸಿ ರ ಪಶ್ಚಿಮ

ದಿಕ್ಕಿನ ಗೋಡೆಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4012/ಸಿ ಮತ್ತು 4013 ರ ಸ್ವತ್ತಿನ ಮೇಲೆ ನನಗೆ ಯಾವುದೇ ಮಾಲ್ಕೀಯ ಹಕ್ಕು ಇಲ್ಲ ಎಂದರೆ ಸರಿ. ಸಿಟಿಎಸ್ ನಂಬರ 4013 ರ ಮಾಲೀಕರನ್ನು ಈ ದಾವೆಯಲ್ಲಿ ಏಕೆ ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದು ನನಗೆ ಹೇಳಲು ಬರುತ್ತದೆ.

7. ಸಿಟಿಎಸ್ ನಂಬರ 4013 ರ ಮಾಲೀಕರಾದ 3 ನೇ ಪ್ರತಿವಾದಿ ತಮ್ಮ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕನ್ನು ಬರೆದುಕೊಟ್ಟಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಯರ ನಡುವೆ ದಾವೆಗಳು ಚಾಲ್ತಿಯಲ್ಲಿವೆ ಎಂದರೆ ಸರಿ. 3 ನೇ ಪ್ರತಿವಾದಿಯ ದಾವೆಗಳ ಬಗ್ಗೆ ಹಾಗೂ ಅವರಿಗೆ ಬೇಕಾಗುವ ಮಾಹಿತಿಯ ಬಗ್ಗೆ ನನಗೆ ತಿಳಿದಿದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಸಂಬಂಧಿಸಿದಂತೆ ಯಾವ ಯಾವ ದಾವೆಗಳು ಇವೆ ಎಂದು ತಿಳಿಸಿರುವುದಿಲ್ಲ. ಈ ದಾವೆ ಹೂಡಿದ ನಂತರ 3 ನೇ ಪ್ರತಿವಾದಿಗೆ ಸಂಬಂಧಿಸಿದ ದಾವೆಗಳ ಬಗ್ಗೆ ನಾನು ಮಾಹಿತಿ ಪಡೆದಿರುತ್ತೇನೆ. 3 ನೇ ಪ್ರತಿವಾದಿ ಹಾಗೂ 1 ಮತ್ತು 2 ನೇ ಪ್ರತಿವಾದಿಯರ ನಡುವಿನ ದಾವೆಯಲ್ಲಿ ನಾನು ಪಕ್ಷಗಾರನಲ್ಲ ಎಂದರೆ ಸರಿ. ಸದರಿಯವರ ನಡುವಿನ ದಾವಾ ಸಂಖ್ಯೆ 422/2015 ನೆಡದಿರುತ್ತದೆ. ಸದರಿ ದಾವೆಯನ್ನು 1 ನೇ ಪ್ರತಿವಾದಿ 3 ನೇ ಪ್ರತಿವಾದಿಯ ವಿರುದ್ದ ಹೂಡಿರುತ್ತಾರೆ. ಈ ದಾವೆಯಲ್ಲಿ ಹಾಜರುಪಡಿಸಿರುವ ಅಸಲು ದಾವಾ ಸಂಖ್ಯೆ 422/2015 ರ ತಿರ್ಪಿನ ಪ್ರತಿಯನ್ನು ನನಗೆ 3 ನೇ ಪ್ರತಿವಾದಿಯು ತಂದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿಯವರ ನಡುವೆ 422/2015 ಹಾಗೂ 423/2020 ದಾವೆ ಇದ್ದು ಬೇರೆ ದಾವೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಅಸಲು ದಾವಾ ಸಂಖ್ಯೆ 422/2015 ರ ತಿರ್ಪಿನ ಪ್ರತಿಯನ್ನು 3 ನೇ ಪ್ರತಿವಾದಿ ನನಗೆ ಕೊಟ್ಟಿದ್ದು, ನಾನು ಅವರು ಕೂಡಿ 1 ಮತ್ತು 2 ನೇ ಪ್ರತಿವಾದಿಯರ ವಿರುದ್ದ ಖೊಟ್ಟಿ ದಾವೆ ಹೂಡಿರುತ್ತೇವೆ

ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನ್ನ ಚಿಕ್ಕಪ್ಪನಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**